# ಸಾರಾಂಶ

# ರೈತ ಮಸೂದೆ, 2017

## ( ಕೃಷಿ ಉತ್ಪನ್ನಗಳಿಗೆ ಖಾತರಿಯುಕ್ತ ಲಾಭದಾಯಕ ಬೆಲೆ ಹಕ್ಕಿಗಾಗಿ)

**{ಎಲ್ಲಾ ರೈತರಿಗೆ ಹಕ್ಕುದಾರಿಕೆ ನೀಡುವ, ಕೃಷಿ ಉತ್ಪನ್ನಗಳನ್ನು ಮಾರುವಾಗ ಖಾತ್ರಿಯಾದ ಲಾಭದಾಯಕ ಬೆಲೆ ಪಡೆಯಲು ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು ಅಥವಾ ಘಟನೆಗಳಿಗೆ ಸಂಬಂಧಿಸಿದ ಮಸೂದೆ}**

**ಖಾತ್ರಿಗೊಳಿಸಿದ ಲಾಭದಾಯಕ ಬೆಲೆಯನ್ನು ರೈತರು ಪಡೆಯಲು ಈ ಮಸೂದೆಯಲ್ಲಿರುವ ನಿಬಂಧನೆಗಳು ಕೆಳಕಂಡಂತಿವೆ.**

## ಅಧ್ಯಾಯ 1: ವ್ಯಾಖ್ಯಾನಗಳು

1. "ವ್ಯವಸಾಯ" ಎಂದರೆ ಹೈನುಗಾರಿಕೆ, ಔಷಧೀಯ ಸಸ್ಯಗಳನ್ನು ಬೆಳೆಯುವುದು ಮತ್ತು ಸಾಕುವುದು, ಬೆಳೆ ಮತ್ತು ಅಂತರ್ಬೆಳೆ, ಹಣ್ಣುಗಳು, ತರಕಾರಿಗಳು, ಹಾಲು ಉತ್ಪಾದನೆ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಹೂವುಗಳು, ಹುಲ್ಲು, ಮೇವಿನ ಹುಲ್ಲು ಮತ್ತು ಮರ ಅಥವಾ ಭೂಮಿಯ ಮೇಲಿನ ಯಾವುದೇ ಕೃಷಿ, ನರ್ಸರಿಗಳನ್ನು ನಿರ್ವಹಿಸುವುದು, ಮೀನು, ಮೃದ್ವಂಗಿ, ಜೇನು, ರೇಷ್ಮೆ ಹುಳು, ಕುಕ್ಕುಟ,ಬಾತುಕೋಳಿ, ಹಸು ಅಥವಾ ಹಂದಿ ಮತ್ತು ವ್ಯವಸಾಯಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಅಥವಾ ಕೃಷಿ ಉದ್ದೇಶದ ಇತರೆ ಚಟುವಟಿಕೆಗಳಿಗೆ ಭೂಮಿಯ ಬಳಕೆ ಮಾಡುವುದು.
2. "ರೈತ" ಎಂದರೆ ಒಬ್ಬ ವ್ಯಕ್ತಿಯು ಆರ್ಥಿಕ ಅಥವಾ ಜೀವನಾಧಾರಕ್ಕಾಗಿ ಬೆಳೆಗಳನ್ನು ಬೆಳೆಯುವ ಅಥವಾ ಭೂಮಿಯ ಮಾಲೀಕತ್ವ ಹೊಂದಿದ ಅಥವಾ ಹೊಂದದೆ ಇತರೆ ಪ್ರಾಥಮಿಕ ಕೃಷಿ ಉತ್ಪನ್ನಗಳನ್ನು ಉತ್ಪಾದಿಸುವ, ಮತ್ತು ಎಲ್ಲಾ ಕೃಷಿ ಹಿಡುವಳಿಗಳನ್ನು ನಿರ್ವಹಿಸುವವರು, ಬೆಳೆಗಾರರು, ಕೃಷಿ ಕೂಲಿಕಾರರು, ಪಾಲು ಬೆಳೆಗಾರರು, ಗುತ್ತಿಗೆ ಕೃಷಿಕರು, ಕುಕ್ಕುಟ ಮತ್ತು ಸಾಕು ಪ್ರಾಣಿಗಳನ್ನು ಸಾಕುವವರು, ಮೀನು ಸಾಕುವವರು, ಜೇನು ಕೃಷಿಕರು, ಕಂಪನಿಯೇತರ ಪ್ಲಾಂಟರ್‌ಗಳು ಮತ್ತು ಪ್ಲಾಂಟೇಷನ್ ಕಾರ್ಮಿಕರು ಅದೇ ರೀತಿ ಅರಣ್ಯ ಉತ್ಪನ್ನಗಳ ಸಂಗ್ರಾಹಕರು. ಸಾಮೂಹಿಕ ಮಾಲೀಕತ್ವ ಅಥವಾ ಗುತ್ತಿಗೆಗೆ ಭೂಮಿಯನ್ನು ಪಡೆದು ಕೃಷಿ ಮಾಡುವ ಸ್ವ-ಸಹಾಯ ಗುಂಪುಗಳು ಒಳಗೊಳ್ಳುತ್ತವೆ.
3. "ಆಯೋಗ" ಎಂದರೆ ಕೃಷಿ ವೆಚ್ಚ ಮತ್ತು ಬೆಲೆಗಾಗಿ ರಚಿತಗೊಂಡಿರುವ ಆಯೋಗ. ಇದರ ವ್ಯಾಪ್ತಿ ಮತ್ತು ವಿವರಣೆ ಕೇವಲ ರೈತರ ವೆಚ್ಚ ಮತ್ತು ಬೆಲೆಗೆ ಸೀಮಿತವಾಗಿದೆ. ಇದು ಹನ್ನೊಂದು ಸದಸ್ಯರದಾಗಿದ್ದು, ಪ್ರದೇಶ, ವಿಭಾಗ ಮತ್ತು ಲಿಂಗ ಹಾಗೂ ರೈತರ ಪ್ರಾತಿನಿಧ್ಯವನ್ನು ಸಮಾನವಾಗಿ ಹೊಂದಿರುತ್ತದೆ.
4. "ರಾಜ್ಯ ಆಯೋಗ" ಎಂದರೆ ಭಾರತ ದೇಶದ ವಿವಿಧ ರಾಜ್ಯಗಳಲ್ಲಿ ರಚನೆಗೊಳ್ಳುವ ಕೃಷಿ ವೆಚ್ಚ ಮತ್ತು ಬೆಲೆಯ ರಾಜ್ಯ ಮಟ್ಟದ ಆಯೋಗ. ಇವು ಕೇಂದ್ರ ಸರ್ಕಾರ ನಿಗದಿ ಮಾಡಿರುವ ಖಾತ್ರಿಗೊಂಡ ಲಾಭದಾಯಕ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಘೋಷಿಸಲು ಸ್ವತಂತ್ರ ಮತ್ತು ಕಾನೂನು ಜಾರಿಯ ಮೇಲುಸ್ತುವಾರಿ ನೋಡಿಕೊಳ್ಳುತ್ತವೆ.

## ಅಧ್ಯಾಯ 2: ಎಲ್ಲಾ ರೈತರು ಅರ್ಹರಾಗುವಂತೆ ಎಲ್ಲಾ ಕೃಷಿ ಸರಕುಗಳಿಗೆ ಖಾತ್ರಿಗೊಂಡ ಲಾಭದಾಯಕ ಬೆಲೆ.

1. ಎಲ್ಲಾ ರೈತರು ಅರ್ಹರಾಗುವಂತೆ ಕೃಷಿ ಸರಕುಗಳಿಗೆ ಖಾತ್ರಿಗೊಂಡ ಲಾಭದಾಯಕ ಬೆಲೆ.
2. ಕೃಷಿ ವೆಚ್ಚ ಮತ್ತು ಬೆಲೆ ಆಯೋಗ(CACP)ದ ಮೂಲಕ ಸರ್ಕಾರ, ಈ ಕಾಯ್ದೆಯ ಅಡಿಯಲ್ಲಿ ನಿರ್ವಚಿಸಿರುವಂತೆ ರೈತರಿಂದ ಉತ್ಪಾದಿತವಾದ ಕೃಷಿ ಸರಕುಗಳ ಉತ್ಪಾದನಾ ವೆಚ್ಚವನ್ನು ಅಂದಾಜು ಮಾಡಲು ವ್ಯವಸ್ಥೆ ಮಾಡುತ್ತದೆ; ಇದು ಸಾಂದರ್ಭಿಕ ಬೆಳೆಗಳು ಅದೇ ರೀತಿ ಪ್ಲಾಂಟೇಷನ್ ಬೆಳೆಗಳು, ತರಕಾರಿ ಮತ್ತು ಹಣ್ಣು, ಹಾಲು, ಹಾಗೆಯೇ ಕಿರು ಅರಣ್ಯ ಉತ್ಪನ್ನಗಳನ್ನು ಒಳಗೊಳ್ಳುತ್ತದೆ;
3. ಯಾವ ಸರಕುಗಳಿಗೆ ಬೆಲೆ ಅಂದಾಜಿಸುವ ವ್ಯವಸ್ಥೆ ಅಸ್ತಿತ್ವದಲ್ಲಿ ಇಲ್ಲವೋ ಅಂತಹ ಬೆಳೆಗಳಿಗೆ, ಆಯಾ ಸಂದರ್ಭದಲ್ಲಿ ಅಗತ್ಯವಾದ ಅಂಕಿ ಅಂಶಗಳನ್ನು ಸಂಗ್ರಹಿಸಲು ಬೇಕಾದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.
4. ಕುಟುಂಬ ಸದಸ್ಯರಿಗೆ ಕುಶಲ ಕೂಲಿಯ ದರ ಮತ್ತು ನಿರ್ವಹಣಾ ವೆಚ್ಚಗಳು ಸೇರಿದಂತೆ ತೆತ್ತ ವೆಚ್ಚಗಳು, ಆರೋಪಿತ ವೆಚ್ಚಗಳನ್ನು ಒಳಗೊಂಡಂತೆ ವೆಚ್ಚವನ್ನು ಸಮಗ್ರವಾಗಿ ಅಂದಾಜಿಸಬೇಕು.
5. ಎಲ್ಲಾ ಕೃಷಿ ಸರಕುಗಳ ಸಮಗ್ರ ವೆಚ್ಚದ ಮೇಲೆ ಕನಿಷ್ಟ 50% ಲಾಭ ಸೇರಿಸಿ CACPಯು ಖಾತ್ರಿಗೊಂಡ ಲಾಭದಾಯಕ ಬೆಲೆಯನ್ನು ಶಿಫಾರಸ್ಸು ಮಾಡಬೇಕು.

6. ಇಂತಹ ಬೆಲೆಯನ್ನು ಮುಂಗಾರು ಬೆಳೆಗಳಿಗೆ ಪ್ರತಿವರ್ಷದ ಮಾರ್ಚ್ 31ರ ಒಳಗೆ ಮತ್ತು ಹಿಂಗಾರು ಬೆಳೆಗಳಿಗೆ ಪ್ರತಿವರ್ಷದ ಆಗಸ್ಟ್ 31ರ ಒಳಗೆ ಘೋಷಣೆ ಮಾಡಬೇಕು.

## ಅಧ್ಯಾಯ 3: ಕೇಂದ್ರದಲ್ಲಿ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ(CACP)

1. ಈಗಿರುವ ಆಯೋಗವನ್ನು ಅಧ್ಯಕ್ಷರೂ ಸೇರಿದಂತೆ ಹನ್ನೊಂದು ಸದಸ್ಯರು ಇರುವಂತೆ ವಿಸ್ತರಿಸಬೇಕು. ಅಧ್ಯಕ್ಷರು ಕೃಷಿ ಆರ್ಥಿಕ ತಜ್ಞರಾಗಿರಬಹುದು.

2. ಕೆಳಕಂಡವರು ಸದಸ್ಯರಾಗಿರುತ್ತಾರೆ: ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಇಲಾಖೆ(MoAFW)ಯಿಂದ ಅಧಿಕೃತ ಸದಸ್ಯ (1); ರೈತರ ಪ್ರತಿನಿಧಿಗಳು (5); ಇತರೆ ಕೃಷಿ ತಜ್ಞರು (3); ಸದಸ್ಯ ಕಾರ್ಯದರ್ಶಿ(1).

3. ಪ್ರದೇಶ, ವಿಭಾಗ ಮತ್ತು ಲಿಂಗ ಪ್ರಾತಿನಿಧ್ಯ ಇರುವಂತೆ ಸಮಾನ ಪ್ರಾತಿನಿಧ್ಯ.

4. ಪಾರದರ್ಶಕ ಕಾರ್ಯನಿರ್ವಹಣೆ, ಮತ್ತು ಯಾವುದೇ ರೀತಿಯ ಸ್ವ ಹಿತಾಸಕ್ತಿಯ ಸಂಘರ್ಷವನ್ನು ತಪ್ಪಿಸಲು ಬೇಕಾದ ಕಲಮುಗಳ ಸೇರ್ಪಡೆ.

5. CACPಯ ಅಧಿಕಾರಗಳು ಇವುಗಳನ್ನು ಒಳಗೊಳ್ಳಬೇಕು

- ಸಮಗ್ರ ವೆಚ್ಚವನ್ನು ಪರಿಗಣಿಸಿ ಅದರ ಮೇಲೆ ಕನಿಷ್ಟ 50% ಲಾಭ ಸಿಗುವಂತೆ ನಿಗದಿಪಡಿಸಿದ ಸೂತ್ರದ ಆಧಾರದಲ್ಲಿ ಎಲ್ಲಾ ಕೃಷಿ ಉತ್ಪನ್ನಗಳಿಗೆ ಖಾತ್ರಿಗೊಂಡ ಲಾಭದಾಯಕ ಬೆಲೆ(ARP)ಯನ್ನು ಶಿಫಾರಸ್ಸು ಮಾಡುವುದು.
- ಮಾರುಕಟ್ಟೆ ಮೂಲಸೌಕರ್ಯ ಮತ್ತು ಪ್ರಕ್ರಿಯೆಯನ್ನು ಉತ್ತಮಪಡಿಸುವುದೂ ಒಳಗೊಂಡು, ರೈತರಿಗೆ ಲಾಭದಾಯಕ ಮತ್ತು ಸ್ಥಿರವಾದ ಬೆಲೆ ಸಿಗುವಂತಹ ವಾತಾವರಣ ನಿರ್ಮಿಸಲು ಬೇಕಾದ ಯಾವುದೇ ಕ್ರಮವನ್ನು ಶಿಫಾರಸ್ಸು ಮಾಡುವುದು.
- ಎಲ್ಲಾ ಆಮದು ಮತ್ತು ರಫ್ತು ನೀತಿಗಳ ಕುರಿತು ಸಮಾಲೋಚನೆಯ ಅಧಿಕಾರ. ಇದರಿಂದಾಗಿ ಆಯೋಗದ ಅಧ್ಯಕ್ಷರ ಜೊತೆ ಕೆಲಸ ಮಾಡುವ ಒಳಗಿನ ಪರಿಣಿತರೊಡನೆ ಸಮಾಲೋಚಿಸಿ ಆಯೋಗ ತನ್ನ ಸಲಹೆಗಳನ್ನು ನೀಡಬಹುದು. ಖಾತ್ರಿಗೊಂಡ ಲಾಭದಾಯಕ ಬೆಲೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರದಂತೆ ತೀರ್ಮಾನಗಳನ್ನು ಕೈಗೊಳ್ಳುವಂತೆ ವಾಣಿಜ್ಯ ಸಚಿವಾಲಯಕ್ಕೆ ಸಲಹೆ ನೀಡುವುದು.

## ಅಧ್ಯಾಯ 4: ಕೃಷಿ ಬೆಲೆ ಸಂಬಂಧಿಸಿದ ರಾಜ್ಯ ಆಯೋಗಗಳು

1. ರಚನೆಯಲ್ಲಿ, ಅವುಗಳು ಕೇಂದ್ರ CACP ಯಂತೆಯೇ ಇರುವುದು.

2. ಕಾರ್ಯ ಮತ್ತು ಅಧಿಕಾರದಲ್ಲಿ, ರಾಜ್ಯ ಆಯೋಗಗಳು ಕೇಂದ್ರ ARP ಯ ಶಿಫಾರಸಿನ ಮೇಲೆ ಹೆಚ್ಚುವರಿ ಬೆಲೆಯನ್ನು ಶಿಫಾರಸ್ಸು ಮಾಡಬಹುದು ( ಉತ್ಪಾದನಾ ವೆಚ್ಚ ಅಥವಾ ನಿರ್ದಿಷ್ಟ ಬೆಳೆಗೆ ಏನಾದರೂ ಪ್ರೋತ್ಸಾಹ ನೀಡಿರುವುದನ್ನು ಆಧರಿಸಬೇಕು), ಬೆಲೆ ಸನ್ನಿವೇಶದ ಉಸ್ತುವಾರಿ, ಕೊರತೆ ಪಾವತಿ ಮಾಡಲು ಆದೇಶ(ಬೆಳೆ ಅಥವಾ ಪ್ರದೇಶ ಸಂಬಂಧ), ಸಾರ್ವಜನಿಕ ಪ್ರಾಧಿಕಾರಗಳು ತಮ್ಮ ಜವಾಬ್ದಾರಿ ನಿರ್ವಹಿಸಲು ವಿಫಲವಾದಾಗ ಪರಿಶೀಲಿಸುವುದು ಮತ್ತು CACPಗೆ ಶಿಫಾರಸ್ಸುಗಳನ್ನು ಕಳುಹಿಸುವುದು.

## ಅಧ್ಯಾಯ 5: ಖಾತ್ರಿಗೊಂಡ ಲಾಭದಾಯಕ ಬೆಲೆಯನ್ನು ಜಾರಿಗೊಳಿಸುವುದು

1. APMC ಯೂ ಸೇರಿದಂತೆ ಎಲ್ಲಾ ಕೃಷಿ ಮಾರುಕಟ್ಟೆಗಳಲ್ಲಿ, ಹರಾಜು ಅಥವಾ ಆಸಕ್ತಿಯ ಬೆಲೆಯು ಪ್ರತಿಯೊಂದು ಬೆಳೆಗೂ ಖಾತ್ರಿಗೊಂಡ ಲಾಭದಾಯಕ ಬೆಲೆಯಿಂದಲೇ ಆರಂಭವಾಗುವಂತೆ ನೋಡಿಕೊಂಡು ಮತ್ತು ಅದಕ್ಕಿಂತ ಕಡಿಮೆ ಬೆಲೆಗೆ ಯಾವ ಹರಾಜು ನಡೆಯದಂತೆನೋಡಿಕೊಳ್ಳುವುದು;

2. ಯಾವುದೇ ಖರೀದಿದಾರ, ಗುತ್ತಿಗೆ ಕೃಷಿಗೆ ಭೂಮಿ ನೀಡಿರುವವರೂ ಸೇರಿದಂತೆ, ಯಾರೂ ಕೂಡಾ ARP ಗಿಂತ ಕಡಿಮೆ ಬೆಲೆಗೆ ಕೊಳ್ಳಬಾರದು, ಮತ್ತು ಯಾರಾದರೂ ARP ಗಿಂತ ಕಡಿಮೆ ಬೆಲೆಗೆ ಖರೀದಿಸಿದರೆ ಅದುಶಿಕ್ಷಾರ್ಹ.

3. ತನ್ನ ಆಹಾರದ ಯೋಜನೆಗಳಿಗೆ ಹೆಚ್ಚಿನ ಸರಕುಗಳನ್ನು ಸಂಗ್ರಹಿಸಲು ಎಲ್ಲಾ ಸರಕುಗಳಿಗೆ ಅಗತ್ಯ ಸಂಖ್ಯೆಯ ಗೋಡೋನುಗಳನ್ನು ತೆರೆಯುವುದು ಸರ್ಕಾರದ ಜವಾಬ್ದಾರಿ.

4. ಪರಿಣಾಮಕಾರಿ ಮತ್ತು ಸಕಾಲಿಕ ಮಾರುಕಟ್ಟೆ ಮಧ್ಯಪ್ರವೇಶದ ಯೋಜನೆಗಳನ್ನು ಜಾರಿಗೆ ತರುವುದು ಮತ್ತು ಅದಕ್ಕೆ ಅಗತ್ಯ ಹಣಕಾಸು ನೀಡುವುದು ಸರ್ಕಾರದ ಜವಾಬ್ದಾರಿ.

5. ರೈತರು ಹತಾಶೆಯಿಂದ ಸರಕುಗಳನ್ನು ಮಾರಾಟ ಮಾಡುವುದನ್ನು ತಡೆಯಲು, ಎಲ್ಲಾ ಬೆಳೆಗಳ ಸಂಗ್ರಹ ಸೌಲಭ್ಯಗಳನ್ನು ಅಪಾರವಾಗಿ ಹೆಚ್ಚಿಸಲು, ಮತ್ತು ಸಂಗ್ರಹಿಸಿದ ಬೆಳೆಯ ಮೌಲ್ಯದ ಮೇಲೆ ರೈತರು ಕನಿಷ್ಠ 75% ಹಣ ಪಡೆಯುವುದನ್ನು ಖಾತ್ರಿಗೊಳಿಸಲು ಸರ್ಕಾರವು ಜವಾಬ್ದಾರಿಯಾಗಿದೆ.

6. ಎಲ್ಲಾ ರೈತರನ್ನು ಕೃಷಿ ಉತ್ಪನ್ನ ಸಂಘಟನೆಯ ಅಡಿಯಲ್ಲಿ ತರಲು ಅಗತ್ಯ ಹೂಡಿಕೆ ಮಾಡುವುದು, ಮೌಲ್ಯವರ್ಧಿತ ಮತ್ತು ಸಂಸ್ಕರಿತ ಉತ್ಪನ್ನಗಳು ಸೇರಿದಂತೆ ಎಲ್ಲಾ ಉತ್ಪನ್ನಗಳನ್ನು ಮಾರಾಟ ಮಾಡಲು ಅಗತ್ಯ ಮೂಲಸೌಕರ್ಯ ಹಾಗೂ ಹಣಕಾಸಿನ ಬಂಡವಾಳ ತೊಡಗಿಸುವುದು ಸರ್ಕಾರದ ಜವಾಬ್ದಾರಿ.

7. ನಿಯಂತ್ರಣ, ಸಹಾಯಧನ ಮತ್ತು ಯೋಜನೆಗಳು, ಹಾಗೂ ಕಡಿಮೆ ವೆಚ್ಚದ ಬಾಳಿಕೆಯ ಕೃಷಿಯನ್ನು ಪ್ರೋತ್ಸಾಹಿಸುವ ಮೂಲಕ ಉತ್ಪಾದನಾ ವೆಚ್ಚವನ್ನು ತಗ್ಗಿಸುವುದು ಸರ್ಕಾರದ ಜವಾಬ್ದಾರಿ.

8. ವಾಸ್ತವ ಸವಲತ್ತುಗಳು ನೈಜ ಬೆಳೆಗಾರರಿಗೆ ತಲುಪಬೇಕು.

## ಅಧ್ಯಾಯ 6: ಸಂಕಷ್ಟ ನಿವಾರಣೆ ಮತ್ತು ಪರಿಹಾರ

1. ಯಾವುದೇ ರೈತ ತನ್ನ ಕೃಷಿ ಸರಕುಗಳಿಗೆ ARP ಯನ್ನು ಪಡೆಯಲು ಸಾಧ್ಯವಾಗದಿದ್ದರೆ, ಅಂತಹ ರೈತನು ARP ಮತ್ತು ಪಡೆದ ಬೆಲೆಯ ನಡುವಿನ ವ್ಯತ್ಯಾಸದ ಬೆಲೆಯನ್ನು ಕೊರತೆ ಪಾವತಿಯ ಮೂಲಕ ಪಡೆಯಲು ಅರ್ಹನಾಗುತ್ತಾನೆ.

2. ವಯಕ್ತಿಕ ದೂರುಗಳನ್ನು ಸ್ವೀಕರಿಸಲು ಮತ್ತು ಪರಿಹರಿಸಲು ಜಿಲ್ಲಾ ಮಟ್ಟದಲ್ಲಿ ಒಂದು 3 ಜನರ ಸಮಿತಿಯನ್ನು ರಚಿಸುವುದು ಮತ್ತು ಈ ಕಾಯ್ದೆಗೆ ಅನುಗುಣವಾಗಿ ಜಿಲ್ಲೆಯ ಮಾರುಕಟ್ಟೆಗಳಲ್ಲಿ ಸರಕಿನ ಬೆಲೆಯ ಮೇಲುಸ್ತುವಾರಿ ಮಾಡುವುದು, ಇದು ರೈತರ ಒಬ್ಬ ಪ್ರತಿನಿಧಿ ಮತ್ತು ಮಾರುಕಟ್ಟೆ ಹಾಗೂ ಕೃಷಿ ಇಲಾಖೆಯ ಒಬ್ಬೊಬ್ಬ ಪ್ರತಿನಿಧಿಯನ್ನು ಒಳಗೊಂಡಿರುತ್ತದೆ.

3. ಕೊರತೆ ಪಾವತಿಯನ್ನು ನಿರ್ವಹಿಸುವ ಸಮಿತಿಯು ವ್ಯಕ್ತಿಗತ ರೈತನನ್ನು ಪರಿಶೀಲಿಸಲು ಸರಳ ಪ್ರಕ್ರಿಯೆಯನ್ನು ರೂಪಿಸಿ, ಕಾಲಮಿತಿಯೊಳಗೆ ಇತ್ಯರ್ಥ ಪಡಿಸಬೇಕು.

4. ಒಂದು ನಿರ್ದಿಷ್ಟ ಸರಕಿನ ಸರಾಸರಿ ಮಾರುಕಟ್ಟೆ ಬೆಲೆಯು ARP ಗಿಂತಲೂ ಕಡಿಮೆಯಿದ್ದಲ್ಲಿ ಆ ನಿರ್ದಿಷ್ಟ ಸರಕನ್ನು ಮಾರಿದ ಎಲ್ಲಾ ಅರ್ಹ ರೈತರಿಗೆ ಕೊರತೆಯನ್ನು ಪಾವತಿ ಮಾಡಲು ಈ ಸಮಿತಿಯು ಶಿಫಾರಸ್ಸು ಮಾಡಬೇಕು.

5. ಯಾರಾದರೂ ಒಬ್ಬ ರೈತ ಮೇಲ್ಕಂಡಂತೆ ಸಹಾಯ ಮತ್ತು ಪರಿಹಾರವನ್ನು ಪಡೆಯದಿದ್ದಲ್ಲಿ, ಅಂತಹ ರೈತ ಸಂಕಷ್ಟ ನಿವಾರಣೆಗಾಗಿ ರಾಜ್ಯ ಆಯೋಗವನ್ನು ಸಂಪರ್ಕಿಸಬಹುದು.

## ಅಧ್ಯಾಯ 7: ಅಪರಾಧ ಮತ್ತು ದಂಡ

1. ಯಾವುದೇ ವ್ಯಾಪಾರಿ ಈ ಕಾಯ್ದೆಯ ಕಲಮುಗಳನ್ನು ಉಲ್ಲಂಘಿಸಿ, ARP ಗಿಂತ ಕಡಿಮೆ ದರಕ್ಕೆ ಖರೀದಿಸಿರುವುದು ಕಂಡು ಬಂದರೆ ಅವರು ಒಂದು ಲಕ್ಷ ರೂಪಾಯಿ ದಂಡಕ್ಕೆ ಒಳಗಾಗಬೇಕಾಗುತ್ತದೆ;

2. ಇದೇ ಅಪರಾಧವನ್ನು ಪುನರಾವರ್ತನೆ ಮಾಡಿದರೆ ಎರಡು ಲಕ್ಷ ರೂಪಾಯಿ ವರೆಗಿನ ಹೆಚ್ಚಿನ ದಂಡಕ್ಕೆಒಳಗಾಗಬೇಕಾಗುತ್ತದೆ;

3. ಮೂರನೇ ಬಾರಿಗೆ ಇದೇ ಅಪರಾಧ ಮಾಡಿದರೆ ಎರಡು ಲಕ್ಷ ರೂಪಾಯಿ ದಂಡ ವಿಧಿಸಿ, ವ್ಯಾಪಾರದ ಅನುಮತಿಯ ಪರವಾನಗಿಯನ್ನು ಹಿಂಪಡೆಯಲಾಗುತ್ತದೆ;

4. ವ್ಯಾಪಾರಿಗಳು ಅವರಿಗೆ ಇಷ್ಟ ಬಂದಾಗ ವ್ಯಾಪಾರದಿಂದ ಹಿಂದೆ ಸರಿಯುವಂತಿಲ್ಲ ಮತ್ತು ಪರವಾನಗಿಯು ಎಷ್ಟು ವ್ಯವಹಾರ ಮಾಡಬೇಕು ಎಂಬ ನಿಬಂಧನೆಗೆ ಒಳಪಟ್ಟಿರುತ್ತದೆ;

5. ಸಕಾಲದಲ್ಲಿ ಮತ್ತು ಅಗತ್ಯ ಸಂಖ್ಯೆಯ ಖರೀದಿ ಕೇಂದ್ರಗಳನ್ನು ತೆರೆಯಲು ವಿಫಲವಾದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಅತ್ಯುನ್ನತ ಅಧಿಕಾರಿ, ಕೃಷಿ ಮಾರುಕಟ್ಟೆ ಜವಾಬ್ದಾರಿ ಇರುವ ಅಥವಾ ಈ ರೀತಿಯ ವಿಫಲತೆಗೆ ಕಾರಣವಾದ ಯಾವುದೇ ಅಧಿಕಾರಿ ವಿಚಾರಣೆಗೆ ಒಳಪಡಬೇಕು ಮತ್ತು ₹50,000 ವರೆಗೆ ದಂಡ ಪಾವತಿಸಬೇಕಾಗುತ್ತದೆ.

## ಅಧ್ಯಾಯ 8: ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲಿನ ಜವಾಬ್ದಾರಿಗಳು

1. ಎಲ್ಲಾ ಸರಕುಗಳ ಸಮಗ್ರ ಬೆಲೆಯನ್ನು ಅಂದಾಜಿಸಲು ಕೇಂದ್ರ ಸರ್ಕಾರವು ಅಗತ್ಯ ನಿಧಿಯನ್ನು ಎತ್ತಿಡಬೇಕು;

2. ಆಯೋಗದ ಶಿಫಾರಸ್ಸುಗಳನ್ನು ಸ್ವೀಕರಿಸಿದ ತಕ್ಷಣ, ಅಥವಾ ಎಷ್ಟು ಬೇಗ ಸಾಧ್ಯವೋ ಅಷ್ಟು, ಕೇಂದ್ರ ಸರ್ಕಾರವು ಎಲ್ಲಾ

ಸರಕುಗಳ ಬೆಲೆ ಘೋಷಿಸಬೇಕು; ಇದರ ಹೊರತಾಗಿ ಬೇರೆಬೇರೆ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರ ಘೋಷಿಸಿದ ARP ಮೇಲೆ ಹೆಚ್ಚಿನ ದರ ಘೋಷಿಸಬಹುದು.

3. ಅಧ್ಯಾಯ 4 ರ ಉಪಬಂಧಗಳನ್ನು ಜಾರಿಗೊಳಿಸುವುದನ್ನು ಪ್ರತಿಯೊಂದು ಮಾರುಕಟ್ಟೆಯಲ್ಲಿ ಖಾತ್ರಿಗೊಳಿಸಿ ಕೃಷಿ ಸರಕುಗಳ ಖರೀದಿ ಬೆಲೆಯನ್ನು ಮೇಲುಸ್ತುವಾರಿ ಮಾಡಲು ಮತ್ತು ಅಧ್ಯಾಯ 5 & 6 ರ ಕೆಳಗೆ ಕಾಲ ಮಿತಿಯಲ್ಲಿ ಕ್ರಮ ಕೈಗೊಳ್ಳಲು ;

4. ಸರ್ಕಾರವು ₹50,000 ಕೋಟಿಗಳ ARP ನಿಧಿಯನ್ನು ಸ್ಥಾಪಿಸಬೇಕು. ಈಗ ಜಾರಿಯಲ್ಲಿರುವ ಆಹಾರದ ಯೋಜನೆಗಳಿಗೆ ಒದಗಿಸುತ್ತಿರುವ ಹಣಕಾಸಿನ ಜೊತೆಗೆ ಈ ನಿಧಿಯನ್ನು ಜಿಲ್ಲಾ ಮಟ್ಟದ ಸಮಿತಿಗಳು ತೀರ್ಮಾನಿಸಿದ ಕೊರತೆ ಪಾವತಿ ಫಲಾನುಭವಿಗಳಿಗೆ ನೇರವಾಗಿ ಪಾವತಿಸಲು ಬಳಸಿಕೊಳ್ಳಬೇಕು. ಇದು ಒಂದು ತಿಂಗಳ ಒಳಗಾಗಿ ಜಾರಿಯಾಗಬೇಕು.

5. ಕೇಂದ್ರ ಸರ್ಕಾರವು ನಿಗದಿ ಮಾಡಿದ ARP ಗಿಂತ ಹೆಚ್ಚು ಬೆಲೆ ನೀಡುವ ಜವಾಬ್ದಾರಿ ನಿರ್ವಹಣೆ ಮಾಡಲು ರಾಜ್ಯ ಸರ್ಕಾರಗಳು ತಮ್ಮದೇ ಸ್ವಂತ ನಿಧಿಯನ್ನು ಸ್ಥಾಪಿಸಿಕೊಳ್ಳಬೇಕು.